# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್:08232236255

ಇಮೇಲ್:aeemdr2@rediffmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರಕಛೇರಿ,
ಗ್ರಾಮಾಂತರ ಉಪ ವಿಭಾಗ, ಮದ್ದೂರು

ಕ್ರಮಾಂಕ:ಸಕಾನಿಇಂ.(ವಿ)/ಹಿಸ/ಗ್ರಾ.ಉವಿ/ಮದ್ದೂರು/ 2650-58 ದಿನಾಂಕ: 8.12.2017

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 23.11.2017 ರಂದು ಜರುಗಿದ ಗ್ರಾಮಾಂತರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂಧಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಅಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾನಿಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 3 | ಶ್ರೀ ನಾಗಭೂಷಣ್ | ಕಾನಿಇಂ(ವಿ) | ಮದ್ದೂರು ವಿಭಾಗ |
| 4 | ಶ್ರೀ ನಾಗರಾಜ್ | ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 5 | ಶ್ರೀಮತಿ ಶ್ವೇತಾ ಎಂ.ಎಸ್. | ಸಕಾಇಂ(ವಿ) | ಮದ್ದೂರು ವಿಭಾಗ |
| 6 | ಶ್ರೀ ಶ್ರೀಕಾಂತ್ ಎಸ್. | ಸಕಾಇಂ(ವಿ) | ಮದ್ದೂರು ಗ್ರಾಮಾಂತರ ಉಪವಿಭಾಗ |
| 7 | ಶ್ರೀ ಜಿ.ಯು.ಮಂಜುನಾಥ್ | ಸಕಾಇಂ(ವಿ) | ಮದ್ದೂರು ಉಪವಿಭಾಗ-1 |
| 8 | ಶ್ರೀ ಮೋಹನ್ ರಾಜ್ | ಸಇಂ(ತಾ) | ಮದ್ದೂರು ಉಪವಿಭಾಗ-2 |
| 9 | ಶ್ರೀ ಮಹದೇವಯ್ಯ | ಪ್ರಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 10 | ಶ್ರೀ ಸಂತೋಷ್ ಎಂ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 11 | ಶ್ರೀ ನಾಗೇಶ್ | ಕಿಇಂ(ವಿ) | ಕೊಪ್ಪಶಾಖೆ |
| 12 | ಶ್ರೀ ಶಿವರಾಜು | ಪ್ರಕಿಇಂ(ವಿ) | ಕೆಸ್ತೂರು ಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಮಂಡ್ಯ ರವರು ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಿಯಿಸಿ ಉತ್ತರಿಸಲಾಯಿತು.

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು –ಶ್ರೀ ನಾಗರಾಜು, ಹೆಮ್ಮನಹಳ್ಳಿ (ಸೋಮನಹಳ್ಳಿ) | |
| 1 | ಆರ್‌ಆರ್ ಸಂಖ್ಯೆ: MIP-3365 ಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿ ಸಭೆಯಲ್ಲಿ ಅರ್ಜಿ ನೀಡಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ಹಾಗೂ ಸಂಬಂಧಪಟ್ಟ ಶಾಖಾಧಿಕಾರಿ ಕೆಸ್ತೂರುರವರಿಗೆ ತಿಳಿಸುತ್ತಾ ನಿಗಮದ ನಿಯಮಾನುಸಾರ ಅಂದಾಜು ಪಟ್ಟಿ ತಯಾರಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| | ಗ್ರಾಹಕರು– ಶ್ರೀ ರಮೇಶ್, ತೈಲೂರು 9880011943 | |
| 2 | 25ಕೆವಿಎ ಪರಿವರ್ತಕ ವಿಫಲಗೊಂಡಿದ್ದು ಹೊಸ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜೇಷ್ಠತಾ ಪಟ್ಟಿಯನುಸಾರ ಜರೂರಾಗಿ ಪರಿವರ್ತಕ ಕೊಡಿಸಿ ಕೊಡುವಂತೆ ವಿಭಾಗೀಯ ಉಗ್ರಾಣದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| | ಗ್ರಾಹಕರು– ಮಾಜೀರ್ ಖಾನ್, ಹಳೇಹಳ್ಳಿ | |
| 3 | 100 ಕೆವಿಎ ಪರಿವರ್ತಕ ವಿಫಲಗೊಂಡಿದ್ದು ಹೊಸ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ವಿಭಾಗೀಯ ಉಗ್ರಾಣದಲ್ಲಿ 100 ಕೆವಿಎ ಪರಿವರ್ತಕ ಲಭ್ಯವಿದ್ದು ಜರೂರಾಗಿ ಪರಿವರ್ತಕ ಕೊಡಿಸಿ ಕೊಡುವಂತೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ ಸೂಚಿಸಿದರು. |
| | ಗ್ರಾಹಕರು– ಅರುವನಹಳ್ಳಿ | |
| 4 | 25ಕೆವಿಎ ಪರಿವರ್ತಕ ವಿಫಲಗೊಂಡಿದ್ದು ಹೊಸ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಇತ್ತೀಚೆಗೆ 25 ಕೆವಿಎ ಪರಿವರ್ತಕಗಳು ಹೆಚ್ಚಾಗಿ ವಿಫಲಗೊಂಡಿದ್ದು ಜೇಷ್ಠತಾ ಪಟ್ಟಿಯನುಸಾರ ಜರೂರಾಗಿ ಪರಿವರ್ತಕ ಕೊಡಿಸಿ ಕೊಡುವುದಾಗಿ ಗ್ರಾಹಕರಿಗೆ ತಿಳಿಸಿದರು. |
| | ಗ್ರಾಹಕರು– ಯಶ್ವಂತ್, ಮದ್ದೂರು | |
| 5 | 10/07/2013ರಲ್ಲಿ ನಿಮ್ಮ ನಿಗಮದ 11ಕೆವಿ ಲೈನ್ ಬಿದ್ದು ಕಬ್ಬು ಸುಟ್ಟುಹೋಗಿದೆ. ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದು ಇದುವರೆವಿಗೂ ಪರಿಹಾರ ಬಂದಿಲ್ಲವೆಂದು ಕೇಳಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ತಮ್ಮ ಮೊಬೈಲ್ ಮುಖಾಂತರ ಸದರಿ ವಿಚಾರವಾಗಿ ಮುಖ್ಯ ಇಂಜಿನಿಯರ್(ವಿ) ರವರ ಕಛೇರಿಗೆ ಮಾತನಾಡಿ ಮುಂದಿನ ವಾರದಲ್ಲಿ ಪರಿಹಾರ ಕೊಡಿಸಿ ಕೊಡುವುದಾಗಿ ಗ್ರಾಹಕರಿಗೆ ತಿಳಿಸಿದರು. |

| | | |
|---|---|---|
| ಗ್ರಾಹಕರು– ಶ್ರೀ ರವೀಂದ್ರ, ಕರಟಗೆರೆ | | |
| 6 | ಆರ್‌ಯುಐಪಿ ಯೋಜನೆಯಡಿ ನಮ್ಮ ಐಪಿ ಸೆಟ್‌ಗೆ 2016ನೇ ಇಸವಿಯಲ್ಲಿ ಹಣ ಕಟ್ಟಿದ್ದೇನೆ. ಮೂಲಭೂತ ಸೌಕರ್ಯ ಒದಗಿಸಿಕೊಡಲು ಕೋರಿದರು | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಆರ್‌ಯುಐಪಿ ಯೋಜನೆಯ ಗುತ್ತಿಗೆದಾರರಿಗೆ ತಮ್ಮ ಮೊಬೈಲ್ ಮುಖಾಂತರ ಮಾತನಾಡಿ ಜರೂರಾಗಿ ಕೆಲಸ ನಿರ್ವಹಿಸಲು ತಿಳಿಸಿದರು. |
| ಗ್ರಾಹಕರು– ಶ್ರೀ ಎಚ್.ಎಂ.ಮಾದಯ್ಯ, ಹುಲಿಗೆರೆಪುರ | | |
| 7 | ಆರ್‌ಯುಐಪಿ ಯೋಜನೆಯಡಿ ಇತ್ತೀಚೆಗೆ ಅಳವಡಿಸಿದ್ದ 25ಕೆವಿಎ ಪರಿವರ್ತಕ ವಿಫಲಗೊಂಡಿದ್ದು ಹೊಸ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಆರ್‌ಯುಐಪಿ ಯೋಜನೆಯ ಗುತ್ತಿಗೆದಾರರಿಗೆ ತಮ್ಮ ಮೊಬೈಲ್ ಮುಖಾಂತರ ಮಾತನಾಡಿ ಜರೂರಾಗಿ ಹೊಸ ಪರಿವರ್ತಕ ಅಳವಡಿಸಲು ತಿಳಿಸಿದರು. |
| ಗ್ರಾಹಕರು– ನ ಲ ಕೃಷ್ಣ, ನಗರಕೆರೆ ಗ್ರಾಮ 9242834721 | | |
| 8 | ಜನಸಂಪರ್ಕ ಸಭೆ ನಡೆಯುವ ದಿನಾಂಕದಂದು ಪತ್ರಿಕಾಮಾಧ್ಯಮ ಹಾಗೂ ದೂರದರ್ಶನ ದವರಿಗೆ ಸಭೆ ಪ್ರಾರಂಭ ಆಗುವ ವೇಳೆಗೆ ತಿಳಿಸಿದರೆ ಗ್ರಾಹಕರು ಜನಸಂಪರ್ಕ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅನುಕೂಲವಾಗುವುದಾಗಿ ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ/ಮದ್ದೂರು ರವರು ಮಾತನಾಡಿ ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿದರು ಹಾಗೂ ಈಗಾಗಲೇ ಭಿತ್ತಿ ಪತ್ರದ ಮೂಲಕ ಸಭೆ ನಡೆಯುವ ಸ್ಥಳ, ದಿನಾಂಕ ಹಾಗೂ ಸಮಯವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ತಿಳಿಸಿರುವುದಾಗಿ ತಿಳಿಸಿದರು. |
| ಗ್ರಾಹಕರು– ನ ಲ ಕೃಷ್ಣ, ನಗರಕೆರೆ ಗ್ರಾಮ 9242834721 | | |
| 9 | ಗ್ರಾಹಕರು ಹೊಂದಿರುವ ಎಲ್ಲಾ ಐಪಿ ಸೆಟ್‌ಗಳಿಗೆ ಮೂಲಭೂತ ಸೌಕರ್ಯ ಒದಗಿಸಿಕೊಟ್ಟಲ್ಲಿ ಎಲ್ಲಾ ರೈತರಿಗೆ ಅನುಕೂಲವಾಗುವುದಾಗಿ ತಿಳಿಸಿದರು. | ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ 2011 ರಿಂದ 2016ರ ವರೆಗಿನ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿದ್ದು, ಮುಂದಿನ ದಿನಗಳಲ್ಲಿ 2017 ರ ಗ್ರಾಹಕರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು |
| ಗ್ರಾಹಕರು– ನ ಲ ಕೃಷ್ಣ, ನಗರಕೆರೆ ಗ್ರಾಮ 9242834721 | | |
| 10 | ಮುಖ್ಯವಾಗಿ ವಿಫಲಪರಿವರ್ತಕ ಸಮಸ್ಯೆಯ ಗ್ರಾಹಕರೇ ಹೆಚ್ಚು. ಹೀಗಾಗಿ ವಿಫಲ ಪರಿವರ್ತಕ ಕೇಳಿ ಬರುವ ಗ್ರಾಹಕರ ದೂರು ಪುಸ್ತಕವನ್ನು ವಿಭಾಗೀಯ ಕಛೇರಿಯಲ್ಲಿಡಲು ಕೋರಿದರು. | ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ವಿಭಾಗೀಯ ಉಗ್ರಾಣದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿ ಪರಿವರ್ತಕ ಸುಟ್ಟ ದಿನಾಂಕ ಹಾಗೂ ಹೊಸ ಪರಿವರ್ತಕ ಮಂಜೂರು ಮಾಡಿದ ದಿನಾಂಕವನ್ನು ಪುಸ್ತಕದಲ್ಲಿ ನೊಂದಾಯಿಸುವಂತೆ ಸೂಚಿಸಿದರು. ಅಲ್ಲದೇ ಪ್ರತೀ ದಿನ ಉಪವಿಭಾಗ/ವಿಭಾಗದ ಸೂಚನಾ ಫಲಕದಲ್ಲಿ ವಿಫಲ ಪರಿವರ್ತಕ ಹಾಗೂ ಮಂಜೂರು ಮಾಡಿದ ಪರಿವರ್ತಕದ ವಿವರವನ್ನು ಪ್ರಕಟಿಸಲು ತಿಳಿಸಿದರು. |

| | | |
|---|---|---|
| | ಗ್ರಾಹಕರು– ನ ಲಿ ಕೃಷ್ಣ, ನಗರಕೆರೆ ಗ್ರಾಮ 9242834721 | |
| 11 | ದಿನೇ ದಿನೇ ವಿಫಲಪರಿವರ್ತಕ ಸಮಸ್ಯೆಯ ಗ್ರಾಹಕರೇ ಹೆಚ್ಚು. ಕಾರಣವೇನು ಎಂದು ಕೇಳಿದರು. | ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ವಿಫಲ ಪರಿವರ್ತಕಗಳ ಪೂರೈಕೆಗಿಂತ ಬೇಡಿಕೆಯೇ ಹೆಚ್ಚಾಗಿದೆಯೆಂದು ತಿಳಿಸಿದರು. ಮುಂದುವರೆದು ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಅನಧಿಕೃತ ಪಂಪ್‌ಸೆಟ್‌ಗಳಿಂದಲೂ ಪರಿವರ್ತಕ ವಿಫಲಗೊಳ್ಳುತ್ತಿರುವುದಾಗಿ ತಿಳಿಸಿದರು. ಮುಂದುವರೆದು ಕುಡಿಯುವ ನೀರು ಸ್ಥಾವರಗಳ ಪರಿವರ್ತಕಗಳು ಸುಟ್ಟಾಗ ಈ ರೀತಿಯ ಸಮಸ್ಯೆ ಬರುವುದಾಗಿ ತಿಳಿಸಿದರು. |
| | ಗ್ರಾಹಕರು– ನ ಲಿ ಕೃಷ್ಣ, ನಗರಕೆರೆ ಗ್ರಾಮ 9242834721 | |
| 12 | ಕಳೆದ 2/3 ತಿಂಗಳ ವಿಫಲ ಪರಿವರ್ತಕಗಳ ಸಂಖ್ಯೆ ಹಾಗೂ ಮಂಜೂರು ಮಾಡಿದ ಪರಿವರ್ತಕಗಳ ಪಟ್ಟಿಯನ್ನು ಕೊಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಪರಿವರ್ತಕ ದಾಖಲಾತಿಯ ವಿವರವನ್ನು ಅಂದರೆ ಕಳೆದ ಏಪ್ರಿಲ್–2017 ರಿಂದ ಅಕ್ಟೋಬರ್ –2017ರ ವರೆಗಿನ ಎಲ್ಲಾ ಮಾಹೆಯ ವಿಫಲ ಪರಿವರ್ತಕಗಳ ಸಂಖ್ಯೆ ಹಾಗೂ ಮಂಜೂರು ಮಾಡಿದ ಪರಿವರ್ತಕಗಳ ಪಟ್ಟಿಯನ್ನು ಸಭೆಯಲ್ಲಿ ಓದಿ ಹೇಳಿದರು. |
| | ಗ್ರಾಹಕರು– ನ ಲಿ ಕೃಷ್ಣ, ನಗರಕೆರೆ ಗ್ರಾಮ 9242834721 | |
| 13 | ಐಪಿ ಸೆಟ್‌ಸಂಖ್ಯೆ ಎಂಐಪಿ 4226 (ತೆರೆದ ಬಾವಿ)ರ ಬಳಿ ಇದ್ದ ಲೈನ್ ಕಳುವಾಗಿದೆ. ದಯವಿಟ್ಟು ಪುನರ್ ಸಂಪರ್ಕ ಕಲ್ಪಿಸಿಕೊಡಿ ಎಂದು ಕೇಳಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ, ಸದರಿ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆಯೇ ಎಂಬುದನ್ನು ಪರಿಶೀಲಿಸಿ, ಕಳುವಾಗಿರುವ ಲೈನ್‌ಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ತಯಾರಿಸಿ ಪುನರ್ ಸಂಪರ್ಕ ಕಲ್ಪಿಸಲು ಜರೂರಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಭೆಯ ಬಗ್ಗೆ ಗ್ರಾಮ ಪಂಚಾಯತಿಗಳಿಗೂ ತಿಳಿಸಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಹಕರು ಸಭೆಗೆ ಹೆಚ್ಚಿನ ರೀತಿಯಲ್ಲಿ ಭಾಗವಹಿಸಿದಲ್ಲಿ ಸಭೆ ಇನ್ನೂ ಹೆಚ್ಚಿಗೆ ಉತ್ತೇಜನ ಕಾರಿಯಾಗಿ ನಡೆಯುವುದಾಗಿ ತಿಳಿಸಿದರು. ಕೊನೆಯದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀ ಶ್ರೀಕಾಂತ್‌ರವರು ಮಾತನಾಡಿ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ವಂದಿಸಿ, ಪತ್ರಿಕಾ ಮಾಧ್ಯಮದವರಿಗೆ ಹಾಗೂ ಗ್ರಾಹಕರಿಗೆ ವಂದಿಸಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ(ವಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
7) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ಉಪವಿಭಾಗ-1 ರವರ ಮಾಹಿತಿಗಾಗಿ ಸಲ್ಲಿಸಿದೆ.
9) ಸಹಾಯಕ ಇಂಜಿನಿಯರ್(ತಾಂ), ಉಪವಿಭಾಗ-1, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
10) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,

ಮು.ಕ